# ಯುದ್ಯೋಪಾಯದ ಪ್ರಭಾವದ ಸುವಾರ್ತೀಕರಣ ಸಾಧನವನ್ನು ಹೇಗೆ ಬಳಸುವುದು




1. ಇವುಗಳ ಕುರಿತಾದ ನಿಮ್ಮ ಸಾಕ್ಷಿಯನ್ನು ಹಂಚಿಕೊಳ್ಳಿರಿ:
   - ನೀವು ಯೇಸುವಿನಲ್ಲಿ ವಿಶ್ವಾಸವಿಡುವ ಮುನ್ನ ನಿಮ್ಮ ಜೀವಿತ ಹೇಗಿತ್ತು,
   - ನೀವು ಯೇಸುವಿನಲ್ಲಿ ರಕ್ಷಕನೆಂದು ನಿಮ್ಮ ನಂಬಿಕೆಯನ್ನು ಹೇಗೆ ಇಡುವವರಾದಿರಿ,
   - ರಕ್ಷಣೆಗಾಗಿ ಯೇಸುವಿನಲ್ಲಿ ವಿಶ್ವಾಸವಿಟ್ಟ ನಂತರ ನಿಮ್ಮ ಜೀವಿತ ಹೇಗೆ ವ್ಯತ್ಯಾಸಗೊಂಡಿತು.

**ಅವರಿಗೆ ಸಾಧನದ ಮುಂದಿನ ಫಲಕವನ್ನು ತೋರಿಸಿರಿ.**


ಹೇಳಿರಿ: “ನೀವು ಏನನ್ನು ನಂಬುತ್ತೀರಿ ಮತ್ತು ನಿಮಗೆ ನಿತ್ಯಜೀವವಿದೆ ಎಂಬ ಖಚಿತತೆಯನ್ನು ಹೇಗೆ ಪಡೆಯಬಹುದು ಎಂಬುದನ್ನು ತೋರಿಸಲು ನಾನು ನಿಮಗೆ ಕೆಲವು ಪ್ರಶ್ನೆಗಳನ್ನು ಕೇಳಲೇ?”

2. ಅವರಿಗೆ ತ್ರಿಕೋನವನ್ನು ತೋರಿಸಿರಿ ಮತ್ತು ಈ ರೇಖಾಚಿತ್ರವು ದೇವರನ್ನು ಪ್ರತಿನಿಧಿಸುತದೆಂದು ಹೇಳಿರಿ. ಹೀಗೆ ಕೇಳಿರಿ, **“ನಿಮಗೆ ದೇವರಲ್ಲಿ ನಂಬಿಕೆಯಿದೆಯಾ? ಆತನು ನಿಮ್ಮನ್ನು ಪ್ರೀತಿಸುವನೆಂದು ನಂಬಿಕೆಯಿದೆಯಾ?”** ವ್ಯಕ್ತಿಯು ಉತ್ತರಿಸುವ ತನಕ ಕಾಯಿರಿ. ಈ ಪ್ರಶ್ನೆಗಳು ಒಬ್ಬ ವ್ಯಕ್ತಿಯೊಂದಿಗೆ ಸುಮ್ಮನೆ ಮಾತಾಡುವದರ ಬದಲಾಗಿ ಒಂದು ಸಂಭಾಷಣೆಯನ್ನು ನಡೆಸುವಂತೆ ನಿಮಗೆ ಸಹಾಯ ಮಾಡುವವು..

3. It ಪ್ರತಿಯೊಂದು ಚಿತ್ರದ ಜೊತೆಯಲ್ಲಿ ಬೈಬಲಿನಿಂದ ವಚನವೊಂದನ್ನು ಓದುವುದು ಪ್ರಾಮುಖ್ಯವಾಗಿರುತ್ತದೆ. **ಯೋಹಾನ 3:16 ರಿಂದ ಆರಂಭಿಸಿರಿ.**(1)
   - ಆ ವ್ಯಕ್ತಿಯಲ್ಲಿ ಬೈಬಲ್ ಇದೆಯೋ ಎಂದು ಕೇಳಿರಿ. ಅವರಲ್ಲಿರುವದಾದರೆ, ಬೈಬಲಿನಲ್ಲಿ ವಚನಗಳನ್ನು ನೋಡುವಂತೆ ಅವರಿಗೆ ಸಹಾಯ ಮಾಡಿರಿ.
   - ಆ ವ್ಯಕ್ತಿಯೇ ವಚನಗಳನ್ನು ಓದಿದರೆ ಅತ್ಯುತ್ತಮವಾಗಿರುತ್ತದೆ. ಹೇಗೂ, ಅವರಿಗೆ ಓದಲು ಸಾಧ್ಯವಿಲ್ಲದಿದ್ದರೆ ಸೂಕ್ಷ್ಮತೆಯುಳ್ಳವಾಗಿರಿ. ಅವರು ಸಂಕೋಚ ಪಟ್ಟರೆ ಅಥವಾ “ನನ್ನ ಕನ್ನಡಕವನ್ನು ತಂದಿಲ್ಲ” ಎಂಬಂತಹ ಮಾತನ್ನು ಹೇಳುವದಾದರೆ, ನೀವೇ ಅದನ್ನು ಓದುವುದು ಸೂಕ್ತ.

4. ಈ ಮೊದಲ ಫಲಕದ ತಳಭಾಗದಲ್ಲಿರುವ ವ್ಯಕ್ತಿಯ ಚಿತ್ರವನ್ನು ಅವರಿಗೆ ತೋರಿಸಿರಿ. ಹೀಗೆ ಕೇಳಿರಿ, **“ಈ ವ್ಯಕ್ತಿಯು ಯಾರನ್ನು ಅವರು ಹೀಗೆ ಹೇಳಬಹುದು, “ಜನರು,”** ಅಥವಾ “ಸೈತಾನನನ್ನು” ಎಂದು ಅಥವಾ ಬೇರೆ ವ್ಯಕ್ತಿಯನ್ನು ಪ್ರತಿನಿಧಿಸುವನೆಂದು ಹೇಳಬಹುದು. ಈ ಚಿತ್ರದಲ್ಲಿರುವವನು ಲೋಕದಲ್ಲಿರುವ ಪ್ರತಿಯೊಬ್ಬರನ್ನೂ –ನೀವು, ನಾನು, ಮತ್ತು ಮಿಕ್ಕ ಎಲ್ಲರೂ - ಪ್ರತಿನಿಧಿಸುವನೆಂದು ಅವರಿಗೆ ತಿಳಿಸಿರಿ. ಜನರು ದೇವರಿಂದ ಬೇರ್ಪಟ್ಟಿರುತ್ತಾರೆಂದು ಸೂಚಿಸುವಂಥ ಕಪ್ಪಾಗಿರುವ  ಕಂದಕವನ್ನು ಅವರಿಗೆ ತೋರಿಸಿರಿ. ರೋಮಾ 3:23 ಓದಿರಿ **(2)** ಮತ್ತು ಹೀಗೆ ಕೇಳಿರಿ, **“ನಮ್ಮಲ್ಲಿ ಒಬ್ಬೊಬ್ಬರು ಪಾಪ ಮಾಡಿರುವದರ ಕಾರಣದಿಂದ ದೇವರಿಂದ ಬೇರ್ಪಟ್ಟಿದ್ದೇವೆ ಎಂದು ಬೈಬಲ್ ಹೇಳುತ್ತದೆ. ನೀವು ದೇವರಿಗೆ ವಿರುದ್ಧ ಪಾಪ ಮಾಡಿರುವಿರೆಂದು ನಂಬುವಿರೋ?”**




5. ರೋಮಾ 6:23 ಓದಿರಿ **(3)** ದೇವರಿಂದ ಬೇರ್ಪಟ್ಟು ಕತ್ತಲೆಯ ಸ್ಥಳದಲ್ಲಿರುವ ಜನರನ್ನು ತೋರಿಸಿರಿ. ಬಳಿಕ ಹೀಗೆ ಪ್ರಶ್ನಿಸಿರಿ, **"ನಿಮ್ಮ ಪಾಪಗಳು ಮರಣವನ್ನುಂಟು ಮಾಡುವವು- ದೇವರಿ ನಿತ್ಯಕ್ಕೂ ಅಗಲುವಂತೆ ಮಾಡುವವೆಂದು ನಂಬುವಿರೋ?"**

6. ಮುಂದಿನ ಫಲಕಕ್ಕೆ ತಿರುಗಿಸಿ ಶಿಲುಬೆಯನ್ನು ತೋರಿಸಿರಿ. ರೋಮಾ 5:8 ಓದಿರಿ **(4)** ಮತ್ತು ಹೀಗೆ ಹೇಳಿರಿ, **"ದೇವರು ನಮ್ಮನ್ನು ಪ್ರೀತಿಸುತ್ತಾನೆ ಮತ್ತು ತನ್ನ ಮಗನನ್ನು ಶಿಲುಬೆಯ ಮೇಲೆ ನಮ್ಮ ಪಾಪಗಳಿಗೋಸ್ಕರ ಮರಣಿಸುವಂತೆ ಕಳುಹಿಸಿ ಕೊಡುವ ಮೂಲಕ ನಮಗೊಂದು ಮಾರ್ಗವನ್ನು ಒದಗಿಸಿದನು. ಯೇಸುವು ನಿಮಗೋಸ್ಕರ ಶಿಲುಬೆಯ ಮೇಲೆ ಮರಣಿಸಿದನೆಂದು ನಂಬುತ್ತೀರೋ?"**

7. ಯೋಹಾನ 14:6 ಓದಿರಿ (5) ಮತ್ತು ಹೀಗೆ ಕೇಳಿರಿ, **"ದೇವರ ಸಂಗಡ ನಿತ್ಯಜೀವವನ್ನು ಅನುಭವಿಸುವಂತೆ ಯೇಸು ಕ್ರಿಸ್ತನು ಏಕೈಕ ದಾರಿಯಾಗಿರುವನೆಂದು ನೀವು ನಂಬುತ್ತೀರೋ?"**

8. 1 ಕೊರಿಂಥ 15:3-8 ಓದಿರಿ (6)ಮತ್ತು ಹೀಗೆ ಕೇಳಿರಿ, **"ದೇವರು ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದನೆಂದು ನೀವು ನಂಬುತ್ತೀರೋ?"**

9. ಮೂರನೆಯ ಫಲಕ್ಕೆ ತಿರುಗಿಸಿರಿ ಮತ್ತು ಅವರಿಗೆ ಉಡುಗೋರೆಯ ಚಿತ್ರವನ್ನು ತೋರಿಸಿ ಹೀಗೆ ಹೇಳಿರಿ, **"ತನ್ನ ಸಂಗಡ ನಿತ್ಯಜೀವವನ್ನು ಅನುಭವಿಸಬೇಕೆಂದು ದೇವರು ಬಯಸುತ್ತಾನೆ ಮತ್ತು ಆತನು ಅದನ್ನು ಉಚಿತ ವರವಾಗಿ ಅನುಗ್ರಹಿಸುತ್ತಾನೆ."** ಬಳಿಕ ಎಫೆಸ 2:8-9ನ್ನು ಓದಿರಿ **(7)** ಮತ್ತು ಹೇಳಿರಿ, **"ನೀವು ಯೇಸುವಿನ ಹೆಸರಿನಲ್ಲಿ ನಂಬಿಕೆಯಿಡುವದಾದರೆ, ದೇವರು ನಿಮಗೆ ತನ್ನ ಮಕ್ಕಳಾಗುವ ಉಡುಗೋರೆಯನ್ನು ನೀಡುವನು."** ಬಳಿಕ ಯೋಹಾನ 1:12 ನ್ನು ಓದಿರಿ **(8).**

10. **"ದೇವರು ತನ್ನ ವರವನ್ನು ತಿರಸ್ಕರಿಸುವವರಿಗೆ ಹೀಗೆ ಹೇಳುವನು"** ಓದಿರಿ (2 ಥೆಸ 1:8-10) **(9). ಆದರೆ, "ನೀವು ಈ ವರವನ್ನು ನಂಬಿಕೆಯಿಂದ ಅಂಗೀಕರಿಸಿಕೊಳ್ಳುವದಾದರೆ, ಆತನ ಸಂಗಡ ನಿಮಗೆ ನಿತ್ಯಜೀವವಿರುವುದು ಎಂದು ದೇವರು ವಾಗ್ದಾನ ಮಾಡುತ್ತಾನೆ"** (1 ಯೋಹಾನ 5:11-12) **(10).**

11. **ಕೇಳಿರಿ: "ಇಂದು ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವ ಮೂಲಕ ನಿತ್ಯಜೀವದ ವರವನ್ನು ಪಡೆದುಕೊಳ್ಳಲು ಬಯಸುತ್ತೀರೊ?"**

ಹೆಸರು ____________

ವಿಳಾಸ ____________

____________

ದೂರವಾಣಿ ಸಂಖ್ಯೆ ____________

ದಿನಾಂಕ ____________ ವಯಸ್ಸು ____________

☐ ನಾನು ಇವತ್ತು ಕ್ರಿಸ್ತನನ್ನು ನನ್ನ ರಕ್ಷಕನನ್ನಾಗಿ ಅಂಗಿಕರಿಸಿಕೊಂಡೆ.

☐ ನನ್ನ ಪ್ರಾರಂಬದ ಕ್ರೈಸ್ತ ನಂಬಿಕೆಯ ಬೆಳವಣಿಗೆಯ ನಿಮಿತ್ತ ನಾಳೆ ನಾನು ಭೇಟಿಯಾಗಲು ಇಚ್ಚಿಸುತ್ತೇನೆ.

ನಾಳೆ ಭೇಟಿಯ ಸಮಯ ____________

ಅಥಾವಾ ಇತರೆ ದಿನಾಂಕ ____________ ಸಮಯ ____________

☐ ಯೇಸು ಕ್ರಿಸ್ತನ ವಿಷಯವಾಗಿ ನಾನು ಇನ್ನೂ ಹೆಚ್ಚಾಗಿ ತಿಳಿದುಕೊಳ್ಳಲು ನನ್ನ ನೆರೆಹೊರೆವರೊಂದಿಗೆ ಬೇಟಿಮಾಡಲು ಇಚ್ಚಿಸುತ್ತೇನೆ.


12. ಉತ್ತರವು "**ಹೌದು**" ಎಂದಾಗಿದ್ದಲ್ಲಿ, ರೋಮಾ 10:9-10ನ್ನು ಓದಿರಿ **(11)**. ನೀವು ಇಂದು ನಿಮ್ಮ ಹೃದಯದಲ್ಲಿ **ನಂಬಿ** ನಿಮ್ಮ ಬಾಯಿಂದ **ಅರಿಕೆಮಾಡಿ** ಕ್ರಿಸ್ತನನ್ನು ಅಂಗೀಕರಿಸಬಹುದು. ಪ್ರಾರ್ಥನೆಯು ನಿಮ್ಮನ್ನು ರಕ್ಷಿಸುವದಿಲ್ಲ. **ಕ್ರಿಸ್ತನಲ್ಲಿ ನೀವು ಇಡುವ ನಂಬಿಕೆಯೇ** ನಿಮ್ಮನ್ನು ರಕ್ಷಿಸುವುದು. ಪ್ರಾರ್ಥನೆಯ ಮಾತುಗಳು ನಿಮ್ಮ ನಂಬಿಕೆಯನ್ನು ವ್ಯಕ್ತಪಡಿಸಬಲ್ಲವು. ಒಂದು ಸರಳವಾದ ಪ್ರಾರ್ಥನೆ ಇಲ್ಲಿದೆ: "ಕರ್ತನಾದ ಯೇಸುವೇ, ನನಗೆ ನೀನು ಬೇಕು. ನಿನ್ನ ವಿರುದ್ಧವಾಗಿ ಪಾಪ ಮಾಡಿದ್ದೇನೆಂದು ಒಪ್ಪಿಕೊಳ್ಳುತ್ತೇನೆ, ದಯವಿಟ್ಟು ನನ್ನ ಪಾಪಗಳನ್ನು ಕ್ಷಮಿಸು. ಪಾಪಗಳ ಕ್ಷಮಾಪಣೆಯ ಮತ್ತು ನಿತ್ಯಜೀವದ ನಿನ್ನ ಉಚಿತವಾದ ವರವನ್ನು ನಂಬಿಕೆಯಿಂದ ಈ ದಿನ ನಾನು ಅಂಗೀಕರಿಸಿಕೊಳ್ಳುವೆನು. ಯೇಸುವಿನ ಹೆಸರಿನಲ್ಲಿ ಬೇಡಿದ್ದೇನೆನೆ, ಆಮೆನ್."

13. ಒಬ್ಬರು ನಂಬಿಕೆಯ ಮೂಲಕ ದೇವರು ನೀಡುವ ನಿತ್ಯಜೀವದ ವರವನ್ನು ಅಂಗೀಕರಿಸಿಕೊಂಡ ಬಳಿಕ, ಹೀಗೆ ಕೇಳಿರಿ, **"ನಿಮ್ಮ ಪಾಪಗಳನ್ನು ಕ್ಷಮಿಸಿ ನಿಮಗೆ ನಿತ್ಯಜೀವವನ್ನು ಕೊಡುವನೆಂದು ಕ್ರಿಸ್ತನಲ್ಲಿ ನೀವು ವಿಶ್ವಾಸವನ್ನಿಡುವಿರೋ?"** ತರುವಾಯ ಅವರ ನೂತನ ನಂಬಿಕೆಯಲ್ಲಿ ಅವರನ್ನು ಪ್ರೋತ್ಸಾಹಿಸಿರಿ ಮತ್ತು ಅವರಿಗಾಗಿ ಪ್ರಾರ್ಥಿಸಿರಿ.

14. ಯುದ್ಧೋಪಾಯದ ಪ್ರಭಾವ ಸುವಾರ್ತೀಕರಣ ಸಾಧನದಲ್ಲಿನ ಕಡೆಯ ಫಲಕವನ್ನು ಹರಿದು ಹಾಕಿರಿ. ಅವರ ಸಂಪರ್ಕದ ಮಾಹಿತಿಯನ್ನು ಸಂಗ್ರಹಿಸಿಕೊಳ್ಳಿರಿ ಮತ್ತು ಸರಿ ಹೊಂದುವ ಪೆಟ್ಟಿಗೆಗಳಲ್ಲಿ ಸರಿಯೆಂದು ಗುರುತಿಸಿರಿ.

15. ಸಾಧ್ಯವಾದಲ್ಲಿ, ಯುದ್ಧೋಪಾಯದ ಪ್ರಭಾವ ಸುವಾರ್ತೀಕರಣ ಸಾಧನವನ್ನು ಬಳಸಿ ಅವರನ್ನು ಶಿಷ್ಯರನ್ನಾಗಿ ಮಾಡುವ ಕೆಲಸವನ್ನು ಆರಂಭಿಸುವದಕ್ಕೆ ನಾಳೆ ಅವರನ್ನು ಭೇಟಿಯಾಗಲು ಸಮಯವನ್ನು ನಿಗಧಿಪಡಿಸಿಕೊಳ್ಳಿರಿ.

16. ಸ್ಥಾಪಿಸಲ್ಪಡುತ್ತಿರುವ ನೂತನ ಸಭೆಯ ಉಪಗುಂಪಿನ ನಾಯಕನಿಗೆ ಆ ಮಾಹಿತಿಯನ್ನು ಒಪ್ಪಿಸಿರಿ.




ಹೆಸರು ____________

ವಿಳಾಸ ____________

____________

ದೂರವಾಣಿ ಸಂಖ್ಯೆ ____________

ದಿನಾಂಕ ____________ ವಯಸ್ಸು ____________

☐ ನಾನು ಇವತ್ತು ಕ್ರಿಸ್ತನನ್ನು ನನ್ನ ರಕ್ಷಕನನ್ನಾಗಿ ಅಂಗಿಕರಿಸಿಕೊಂಡೆ.

☐ ನನ್ನ ಪ್ರಾರಂಬದ ಕ್ರೈಸ್ತ ನಂಬಿಕೆಯ ಬೆಳವಣಿಗೆಯ ನಿಮಿತ್ತ ನಾಳೆ ನಾನು ಭೇಟಿಯಾಗಲು ಇಚ್ಚಿಸುತ್ತೇನೆ.

ನಾಳೆ ಭೇಟಿಯ ಸಮಯ ____________

ಅಥಾವಾ ಇತರೆ ದಿನಾಂಕ ____________ ಸಮಯ ____________

☐ ಯೇಸು ಕ್ರಿಸ್ತನ ವಿಷಯವಾಗಿ ನಾನು ಇನ್ನೂ ಹೆಚ್ಚಾಗಿ ತಿಳಿದುಕೊಳ್ಳಲು ನನ್ನ ನೆರೆಹೊರೆವರೊಂದಿಗೆ ಬೇಟಿಮಾಡಲು ಇಚ್ಚಿಸುತ್ತೇನೆ.